ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ________

ಪತ್ರಿಕೆಯ ಹೆಸರು : NAME OF THE NEWS PAPER : ________ ದಿನಾಂಕ : DATE : 24/07/2019

# ಸ್ಪೀಕರ್ ಜೇಬಿನಲ್ಲಿ ರಾಜೀನಾಮೆ ಪತ್ರ



ಬೆಂಗಳೂರು: ವಿಶ್ವಾಸಮತ ಪ್ರಕ್ರಿಯೆ ಪೂರ್ಣಗೊಳ್ಳದೇ ಇದ್ದರೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲು ಸಿದ್ಧರಾಗಿದ್ದ ವಿಚಾರವನ್ನು ಖುದ್ದು ಸ್ಪೀಕರ್ ರಮೇಶ್ ಕುಮಾರ್ ಬಹಿರಂಗಗೊಳಿಸಿದ್ದಾರೆ.

ಶಾಸಕ ಎಚ್.ವಿಶ್ವನಾಥ್ ತಮ್ಮ ಬಗ್ಗೆ ಹಗುರವಾಗಿ ಮಾತನಾಡಿದ ಬಗ್ಗೆ ಸದನದಲ್ಲಿ ನಡೆದ ವ್ಯಾಪಕ ಚರ್ಚೆ ಹಿನ್ನೆಲೆಯಲ್ಲಿ ಭಾವುಕರಾದ ಅವರು, "ನಾನು ಕೆ.ಎಚ್.ರಂಗನಾಥ್ ಅವರಂಥ ರಾಜಕಾರಣಿಗಳ ಗರಡಿಯಲ್ಲಿ ಬೆಳೆದು ಬಂದವನು. ದೇವರಾಜ್ ಅರಸು ಅವರನ್ನು ನಡುದಾರಿಯಲ್ಲಿ ಬಿಟ್ಟು ಹೋದವರು ನನ್ನ ಬಗ್ಗೆ ಮಾತನಾಡುತ್ತಾರೆ. ನಾನು ಮರ್ಯಾದೆಗೆ ಅಂಜುವ ವ್ಯಕ್ತಿ. ಇಂದು ವಿಶ್ವಾಸಮತ ಪ್ರಕ್ರಿಯೆ ಪೂರ್ಣಗೊಳ್ಳದೇ ಇದ್ದರೆ ಜನ ಏನು ಮಾತನಾಡಬಹುದೆಂಬುದನ್ನು ಊಹಿಸಿಕೊಂಡರೆ ನನಗೆ ಭಯವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ರಾಜೀನಾಮೆ ಪತ್ರವನ್ನು ಕಿಸೆಯಲ್ಲಿಟ್ಟುಕೊಂಡೇ ಬಂದಿದ್ದೇನೆ. ಬೇಕಾದರೆ ನೋಡಿ," ಎಂದು ಪ್ರತಿಪಕ್ಷ ನಾಯಕ ಯಡಿಯೂರಪ್ಪ ಅವರಿಗೆ ಪತ್ರವನ್ನು ಕಳುಹಿಸಿಕೊಟ್ಟರು.

3